ದಿನಾಂಕಃ 21.06.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಯರ ಪರವಾಗಿ ಮಾನ್ಯ ಶ್ರೀ ಕೆ ಎಸ್ ವಕೀಲರಿಂದಃ**

ನಾನು ಈ ದಾವೆಯನ್ನು ನನಗೆ ಮತ್ತು ನನ್ನ ಮಗನಿಗೆ ಭಾಗ ಬರಬೇಕು ಎಂದು ಈ ದಾವೆಯನ್ನು ಸಲ್ಲಿಸಿದ್ದೇನೆ. ನನ್ನ ಅತ್ತೆ ಗೌರಮ್ಮ ಈಗ ಬದುಕಿಲ್ಲ ಎಂದರೆ ಸರಿ. ನನ್ನ ಬಾವ ನಿಂಗರಾಜಮೂರ್ತಿ ರವರೂ ಕೂಡ ಮೃತಪಟ್ಟಿರುತ್ತಾರೆ. ನನ್ನ ಯಜಮಾನರ ಜೊತೆ ಒಬ್ಬ ತಂಗಿ ಮತ್ತು ಅಣ್ಣ ಹುಟ್ಟಿರುತ್ತಾರೆ. ನನ್ನ ಗಂಡನ ತಂದೆಯಾದ ಮುದ್ದಯ್ಯರವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ಈ ದಾವೆಯನ್ನು ನಾನೇ ಹಾಕಿಸಿದ್ದೇನೆ. ಮುದ್ದಯ್ಯರವರ ತಂದೆಯ ಹೆಸರನ್ನು ನಾನು ಈ ದಾವೆಯಲ್ಲಿ ಬರೆಸಿಲ್ಲ. ನಾನು ಈ ದಾವೆಯಲ್ಲಿ ನಮ್ಮ ಕುಟುಂಬದ ವಂಶವೃಕ್ಷವನ್ನು ನೀಡಿದ್ದೇನೆ, ಆದರೆ ಮುದ್ದಯ್ಯನ ತಂದೆ ಯಾರು ಎಂದು ನಾನು ತಿಳಿಸಿಲ್ಲ. ಅದೇ ರೀತಿಯಾಗಿ ಮುದ್ದಯ್ಯನ ತಂದೆಯ ಹೆಸರನ್ನು ಈ ದಾವೆಯಲ್ಲಿ ನಮೂದು ಮಾಡಿಲ್ಲ. ಮುದ್ದಯ್ಯರವರ ಜೊತೆ ಮೂರು ಜನ ಜನಿಸಿರುತ್ತಾರೆ. ಮುದ್ದಯ್ಯರವರ ಜೊತೆ ಹೆಣ್ಣು ಮಕ್ಕಳು ಜನಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ಮುದ್ದಯ್ಯರವರ ಜೊತೆ ಜನಿಸಿರುವ ಅಣ್ಣ ತಮ್ಮಂದಿರ ಹೆಸರು ನಿಂಗಯ್ಯ, ಉಳಿದ ಮೂರು ಜನರ ಹೆಸರು ನನಗೆ ಗೊತ್ತಿಲ್ಲ. ಮುದ್ದಯ್ಯ ರವರ ಕುಟುಂಬಕ್ಕೆ ಎಷ್ಟು ಆಸ್ತಿಗಳಿತ್ತು ಎಂದು ನನಗೆ ಗೊತ್ತಿಲ್ಲ. ಮುದ್ದಯ್ಯನವರ ಹೆಸರಿನಲ್ಲಿ ಆಸ್ತಿಗಳು ಇರುವ ಬಗ್ಗೆ ನನಗೆ ಗೊತ್ತಿಲ್ಲ. ಮುದ್ದಯ್ಯನವರ ಅಣ್ಣತಮ್ಮಂದಿರು ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದಾರಾ ಎಂದರೆ ಸಾಕ್ಷಿ ನಮ್ಮ ಮದುವೆಗೆ ಮುಂಚೆ ಮಾಡಿಕೊಂಡಿದ್ದಾರೆಂದು ಉತ್ತರಿಸುತ್ತಾರೆ.

ಮುದ್ದಯ್ಯ ಮತ್ತು ಅವರ ಹೆಂಡತಿಯ ಭಾಗಕ್ಕೆ ಸರ್ವೇ ನಂಬರ್ ಜಮೀನುಗಳು ಮತ್ತು ಒಂದು ನಿವೇಶನ ಬಂದಿರುತ್ತದೆ. ಆದರೆ, ಅದರ ಸರ್ವೇನಂಬರ್ ಗಳು ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ಯಾವ ಆಸ್ತಿಗಳನ್ನು ಮತ್ತು ಸರ್ವೇ ನಂಬರ್ ಗಳನ್ನು ಸೇರಿಸಿದ್ದೀರಿ ಎಂದರೆ ಅದು ನಮ್ಮ ಗಂಡನಿಗೆ ಮಾತ್ರ ಗೊತ್ತಿದೆಯೆಂದು ಉತ್ತರಿಸುತ್ತಾರೆ. ನನ್ನ ಗಂಡನ ಅಣ್ಣತಮ್ಮಂದಿರು ಅವರ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುವುದಿಲ್ಲ. ನನ್ನ ಗಂಡ ಮತ್ತು ಅವರ ಅಣ್ಣ ತಮ್ಮಂದಿರು

ಅವರವರ ಭಾಗದ ಜಮೀನುಗಳಲ್ಲಿ ವ್ಯವಸಾಯವನ್ನು ಮಾಡುತ್ತಿದ್ದಾರೆ. ನಾನು ಈ ದಾವೆಯನ್ನು ನಮ್ಮ ಅತ್ತೆಯವರ ಹೆಸರಿನಲ್ಲಿರುವ ಜಮೀನುಗಳಿಗೆ ಹಾಕಿರುತ್ತೇನೆ. ನಿಮ್ಮ ಗಂಡನ ಭಾಗಕ್ಕೆ ಬಂದಿದ್ದ ಜಮೀನಿನ ಮೇಲೆ ಮಾತ್ರ ದಾವೆಯನ್ನು ಸಲ್ಲಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿ ನನ್ನ ಗಂಡನ ಅಣ್ಣತಮ್ಮಂದಿರು ಮನೆಯಲ್ಲಿ ಇರಬೇಡಿ ಎಂದು ತಿಳಿಸಿದ ಕಾರಣ ನಾನು ದಾವೆಯನ್ನು ಹಾಕಿದ್ದೇನೆಂದು ಉತ್ತರಿಸುತ್ತಾರೆ. ನನ್ನ ಗಂಡ ಎಷ್ಟು ವಿಸ್ತೀರ್ಣದ ಜಮೀನುಗಳಲ್ಲಿ ಮತ್ತು ಯಾವ ಸರ್ವೇ ನಂಬರ್ ಗಳಲ್ಲಿ ವ್ಯವಸಾಯ ಮಾಡುತ್ತಿದ್ದಾರೆಂದು ನಿಮಗೆ ಗೊತ್ತಿದೆಯೇ ಎಂದರೆ ಸಾಕ್ಷಿ ಇಲ್ಲಾ ಎಂದು ನುಡಿಯುತ್ತಾರೆ. ನಾನು ಜಮೀನು ಮತ್ತು ಆಸ್ತಿಗಳಿಗಾಗಿ ಮಾತ್ರ ಈ ದಾವೆಯನ್ನು ಸಲ್ಲಿಸಿರುತ್ತೇನೆ ಆದರೆ, ನಾನು ಯಾವ ಆಸ್ತಿಗಳಿಗೆ ಈ ದಾವೆಯನ್ನು ಸಲ್ಲಿಸಿದ್ದೇನೆಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳು ನನ್ನ ಅತ್ತೆ ಗೌರಮ್ಮ ಮತ್ತು ನನ್ನ ಮಾವ ಮುದ್ದಯ್ಯ ರವರ ಹೆಸರಿನಲ್ಲಿದೆ. ನೀವು ಮುದ್ದಯ್ಯರವರ ತಂದೆಯ ಹೆಸರು ಕುರಿಮರಿ ಗಂಟೆ ಎಂದು ನಮೂದು ಮಾಡಿದ್ದೀರಿ ಎಂದರೆ ಸರಿ. ನಿಮ್ಮ ಮಾವ ಮುದ್ದಯ್ಯರವರ ತಂದೆಯ ಹೆಸರು ಗಂಟಯ್ಯ ಎಂದರೆ ನನಗೆ ಗೊತ್ತಿಲ್ಲ.

ನಾನು ಈ ದಾವೆಯನ್ನು ನಮ್ಮ ಯಜಮಾನರಿಗೆ ಬರುವ ಆಸ್ತಿಗಳಲ್ಲಿ ಸಮಭಾಗ ಬರಬೇಕು ಎಂದು ಸಲ್ಲಿಸಿರುತ್ತೇನೆ. ನಿಮ್ಮ ಅತ್ತೆಯ ಹೆಸರಿನಲ್ಲಿದ್ದ ಆಸ್ತಿಗಳನ್ನು ಲಿಂಗರಾಜು, ನಮ್ಮ ಯಜಮಾನರು ಮತ್ತು ಅವರ ತಂಗಿ ಅವರವರ ಹೆಸರಿಗೆ ಬಂದಂತಹ ಆಸ್ತಿಗಳಲ್ಲಿ ವ್ಯವಸಾಯ ಮಾಡುತ್ತಿದ್ದಾರೆಂದರೆ ಸಾಕ್ಷಿ ನನ್ನ ಭಾವ ಲಿಂಗರಾಜು ಮೂರ್ತಿ ಮತ್ತು ನನ್ನ ಗಂಡ ಮಾತ್ರ ವ್ಯವಸಾಯ ಮಾಡುತ್ತಿದ್ದಾರೆ ಅವರ ತಂಗಿ ಭಾಗ್ಯಮ್ಮರವರಿಗೆ ಭಾಗ ನೀಡಿಲ್ಲ ಎಂದು ಉತ್ತರಿಸುತ್ತಾರೆ. ನಾನು ದಾವೆಯಲ್ಲಿ ನಮೂದು ಮಾಡಿರುವ ಆಸ್ತಿಗಳ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಮ್ಮ ಕುಟುಂಬಕ್ಕೆ ಎರಡು ಮನೆಗಳಿವೆ ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ. ಸದರೀ ಮನೆಗಳು ಒಂದು ಗೌರಮ್ಮ ಮತ್ತು ಇನ್ನೊಂದು ಮುದ್ದಯ್ಯನವರ ಹೆಸರಿನಲ್ಲಿದೆ. ಗೌರಮ್ಮನ ಹೆಸರಿನಲ್ಲಿ ಹೆಂಚಿನ ಮನೆಯಿತ್ತು, ಈಗ ಹೆಂಚನ್ನು ತೆಗೆದುಹಾಕಿ ಶೀಟ್ ನ್ನು ಅಳವಡಿಸಿದ್ದಾರೆ. ಮುದ್ದಯ್ಯನವರ ಹೆಸರಿನಲ್ಲಿ ಮನೆಯಿರುವ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿದ್ದೇನೆ. ಸದರೀ ದಾಖಲೆಯನ್ನು ನೋಡಿದ್ದೀರಾ ಎಂದರೆ ಸಾಕ್ಷಿ ಮೊದಲಿಗೆ ಖಾಲಿ

ನಿವೇಶನ ಇತ್ತು,ಈಗ ಮನೆಯನ್ನು ಕಟ್ಟಿಸಿಕೊಂಡಿದ್ದಾರೆಂದು ಉತ್ತರಿಸುತ್ತಾರೆ.

ನಿ.ಪಿ. 7 ರ ಅಸೆಸ್‌ಮೆಂಟ್ ಎಕ್ಸ್ ಟ್ರ್ಯಾಕ್ಟ್ ನಿಂಗಯ್ಯರವರ ಮಗ ಮುದ್ದಯ್ಯರವರಿಗೆ ಸೇರಿದ ಆಸ್ತಿ ಎಂದರೆ ಸರಿಯಲ್ಲ. ಸದರೀ ಮನೆ ನಿಮ್ಮ ಕುಟುಂಬಕ್ಕೆ ಸೇರಿದ ಮನೆಯಲ್ಲವೆಂದರೆ ಸರಿಯಲ್ಲ.

**ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖಾನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

2 ನೇ ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಮದ್ದೂರು.

ಸಾಕ್ಷಿಯ ಸಹಿಃ